ಸಂಖ್ಯೆ:ಎಫ್4:ಪಚೀ:ಸಿಆರ್:50:2008–09

ಜಿಲ್ಲಾಧಿಕಾರಿಯವರ ಕಛೇರಿ,
(ಆಹಾರ ವಿಭಾಗ)
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದಿನಾಂಕ:26–9–2009

179

**ಅಧಿಕೃತ ಜ್ಞಾಪನ**

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮೇಜು ತಪಾಸಣೆ ಮಾಡುವ ಮೂಲಕ ಪರಿಶೀಲಿಸಿ ಅನರ್ಹ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಗುರುತಿಸಿ ಸದರಿ ಕೂಪನ್‌ಗಳನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಅಧಿಕೃತ ಜ್ಞಾಪನಾ ಸಮ ಸಂಖ್ಯೆ ದಿನಾಂಕ:29–8–2009.
2) ತಹಶೀಲ್ದಾರ್‌ರು, ದೇವನಹಳ್ಳಿ ತಾಲ್ಲೂಕು ರವರ ಫ್ಯಾಕ್ಸ್ ಸಂದೇಶ ದಿನಾಂಕ: 3–9–2009 ಹಾಗೂ ದಿನಾಂಕ:24–9–2009.
3) ತಹಶೀಲ್ದಾರ್‌ರು, ದೊಡ್ಡಬಳ್ಳಾಪುರ ತಾಲ್ಲೂಕು ರವರ ಪತ್ರ ಸಂಖ್ಯೆ:ಎಫ್‌ಸಿಎಸ್:ಡಿಬಿಪಿ:8:2008–09, ದಿನಾಂಕ:8–9–2009, ಹಾಗೂ ದಿನಾಂಕ: 24–9–2009.
4) ತಹಶೀಲ್ದಾರ್‌ರು, ಹೊಸಕೋಟೆ ತಾಲ್ಲೂಕು ರವರ ಪತ್ರ ಸಂಖ್ಯೆ:ಸಿಎಸ್‌ಡಿ:ಸಿಆರ್:340:ಎ:2004–05, ದಿನಾಂಕ:5–9–2009, 10–9–2009 ಹಾಗೂ 24–9–2009.
5) ತಹಶೀಲ್ದಾರ್‌ರು, ನೆಲಮಂಗಲ ತಾಲ್ಲೂಕು ರವರ ಪತ್ರ ಸಂಖ್ಯೆ:ಸಿಎಸ್‌ಡಿ:ಸಿಆರ್:84:2009–10, ದಿನಾಂಕ:3–9–2009 ಹಾಗೂ ದಿನಾಂಕ: 25–9–2009.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ರವರ ದಿನಾಂಕ:19–8–2009ರ ಅರೆ ಸರ್ಕಾರಿ ಪತ್ರದಲ್ಲಿ ನೀಡಲಾದ ಸೂಚನೆ ಮೇರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ತಾತ್ಕಾಲಿಕ ಪಡಿತರ ಕೂಪನ್‌ಗಳಲ್ಲಿ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ, ರದ್ದು ಪಡಿಸುವ ಬಗ್ಗೆ ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಸದರಿ ಅರ್ಜಿಗಳನ್ನು ದಿನಾಂಕ:2–9–2009ರಂದು ಮೇಜು ತಪಾಸಣೆಗೆ ಒಳಪಡಿಸಲಾಯಿತು. ದಿನಾಂಕ:5–9–2009ರೊಳಗೆ ವರದಿಯನ್ನು ಸಲ್ಲಿಸುವಂತೆ ಎಲ್ಲಾ 4 ತಾಲ್ಲೂಕುಗಳ ತಹಶೀಲ್ದಾರ್‌ರುಗಳಿಗೆ ಉಲ್ಲೇಖ (1)ರ ಅಧಿಕೃತ ಜ್ಞಾಪನದಲ್ಲಿ ಆದೇಶಿಸಲಾಗಿತ್ತು. ಅದರಂತೆ ಎಲ್ಲಾ ತಹಶೀಲ್ದಾರ್‌ರುಗಳು ತಾತ್ಕಾಲಿಕಪಡಿತರ ಕೂಪನ್ ಅರ್ಜಿಗಳನ್ನು ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳು ಹಾಗೂ ಬಿಲ್ ಕಲೆಕ್ಟರ್‌ಗಳು ಹಾಗೂ ನಗರಸಭೆ/ಪುರಸಭೆಗಳ ಸಿಬ್ಬಂದಿಗಳ ಮೂಲಕ ಮೇಜು ತಪಾಸಣೆ ಮಾಡಿಸಿ ಅನರ್ಹ ತಾತ್ಕಾಲಿಕ ಪಡಿತರ ಕೂಪನ್ ಅರ್ಜಿದಾರರುಗಳನ್ನು ಪತ್ತೆ ಹಚ್ಚಿ ಉಲ್ಲೇಖ (2)ರಿಂದ (5)ರವರೆಗಿನ ಪತ್ರಗಳಲ್ಲಿ ವರದಿಗಳನ್ನು ಸಲ್ಲಿಸಿರುತ್ತಾರೆ. ಪತ್ತೆ ಹಚ್ಚಲಾದ ಅನರ್ಹ ತಾತ್ಕಾಲಿಕ ಪಡಿತರ ಕೂಪನ್‌ಗಳ ತಾಲ್ಲೂಕುವಾರು ವಿವರಗಳನ್ನು ಈ ಕೆಳಕಾಣಿಸಿದಂತೆ ಇರುತ್ತದೆ.

| ಕ್ರ. ಸಂ | ತಾಲ್ಲೂಕಿನ ಹೆಸರು | ಮೇಜು ತಪಾಸಣೆಗೆ ಒಳಪಡಿಸಿದ ಅರ್ಜಿಗಳು | | | ಅನರ್ಹ ತಾತ್ಕಾಲಿಕ ಪಡಿತರ ಕೂಪನ್ ಗುರುತಿಸಿರುವುದು | | |
|---|---|---|---|---|---|---|---|
| | | ನಗರ/ ಪಟ್ಟಣ | ಗ್ರಾಮಾಂತರ | ಒಟ್ಟು | ನಗರ/ ಪಟ್ಟಣ | ಗ್ರಾಮಾಂತರ | ಒಟ್ಟು |
| 1 | ದೇವನಹಳ್ಳಿ | 6525 | 9321 | 15846 | 1120 | 2420 | 3540 |
| 2 | ಡಿ.ಬಿ.ಪುರ | 10206 | 13419 | 23625 | 2025 | 4864 | 6889 |
| 3 | ಹೊಸಕೋಟೆ | 5991 | 15609 | 21600 | 1988 | 5014 | 7002 |
| 4 | ನೆಲಮಂಗಲ | 3525 | 9474 | 12999 | 627 | 1304 | 1931 |
| | ಒಟ್ಟು | 26247 | 47823 | 74070 | 5760 | 13602 | 19362 |

ಈ ಜಿಲ್ಲೆಯ ನಾಲ್ಕು ತಾಲ್ಲೂಕುಗಳಿಂದ ಒಟ್ಟು 19362 ಅರ್ಜಿಗಳನ್ನು ಬಿಪಿಎಲ್ ಪಡಿತರ ಚೀಟಿ ಹೊಂದಲು ಅನರ್ಹರೆಂದು ಗುರುತಿಸಿ, ತಾಲ್ಲೂಕುಗಳಿಂದ ಬಂದಿರುವ ವರದಿಗಳ ಆಧಾರದ ಮೇಲೆ ಸದರಿ ಅರ್ಜಿದಾರರು ಹೊಂದಿರುವ ಕೂಪನ್‌ಗಳನ್ನು ರದ್ದುಗೊಳಿಸಲು ಈ ಕೆಳಕಾಣಿಸಿದ ಆದೇಶ ಮಾಡಿದೆ.

## ಆದೇಶ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿರುವ ನೆಮ್ಮದಿ ಕೇಂದ್ರಗಳ ಮೂಲಕ ಬಿಪಿಎಲ್ ಪಡಿತರ ಚೀಟಿ ಪಡೆಯಲು ಸಲ್ಲಿಸಿದ್ದ ಅರ್ಜಿಗಳನ್ನು ವಿತರಿಸಲಾಗಿದ್ದ 76098 ಬಿಪಿಎಲ್ ತಾತ್ಕಾಲಿಕ ಪಡಿತರ ಕೂಪನ್‌ಗಳಲ್ಲಿ ಒಟ್ಟು 19632 ಕೂಪನ್‌ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಲಾಗಿದೆ. ತಾಲ್ಲೂಕುವಾರು ರದ್ದುಪಡಿಸಿದ ತಾತ್ಕಾಲಿಕ ಕೂಪನ್‌ಗಳ ಯೂನಿಟ್ ವಿವರಗಳು ಈ ಕೆಳಕಾಣಿಸಿದಂತಿದೆ.

| ಕ್ರ.ಸಂ | ತಾಲ್ಲೂಕಿನ ಹೆಸರು | ರದ್ದು ಪಡಿಸಲಾದ ತಾ. ಪಡಿತರ ಕೂಪನ್‌ಗಳು | 1 ಯೂನಿಟ್ | 2 ಯೂನಿಟ್ | 3 ಯೂನಿಟ್ | 4 ಯೂನಿಟ್ | 5 ಯೂನಿಟ್ | ಒಟ್ಟು |
|---|---|---|---|---|---|---|---|---|
| 1 | ದೇವನಹಳ್ಳಿ | 3540 | 70 | 627 | 830 | 1133 | 890 | 3540 |
| 2 | ಡಿ.ಬಿ.ಪುರ | 6889 | 30 | 45 | 235 | 4780 | 1799 | 6889 |
| 3 | ಹೊಸಕೋಟೆ | 7002 | 917 | 1337 | 1682 | 1580 | 1486 | 7002 |
| 4 | ನೆಲಮಂಗಲ | 1931 | 222 | 667 | 488 | 344 | 210 | 1931 |
| | ಒಟ್ಟು | 19362 | 1239 | 2676 | 3225 | 7837 | 4385 | 19362 |

ರದ್ದು ಪಡಿಸಲಾದ ಒಟ್ಟು 19362 ಬಿಪಿಎಲ್ ತಾತ್ಕಾಲಿಕ ಪಡಿತರ ಕೂಪನ್‌ಗಳಿಂದ ಸರ್ಕಾರಕ್ಕೆ ಸಹಾಯಧನದ/ಸಾಗಾಣಿಕೆ ಬಾಬ್ತು ವೆಚ್ಚ ಉಳಿತಾಯವಾಗಲಿದೆ. 2009ರ ಸೆಪ್ಟೆಂಬರ್ ತಿಂಗಳಿಂದ ಜಾರಿಗೆ ಬರುವಂತೆ ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ತಾತ್ಕಾಲಿಕ ಪಡಿತರ ಕೂಪನ್‌ಗಳಿಗೆ ಪಡಿತರ ಆಹಾರಧಾನ್ಯ ಮತ್ತು ಸೀಮೆಎಣ್ಣೆ ಬೇಡಿಕೆ ಸಲ್ಲಿಸುವಾಗ ರದ್ದು ಪಡಿಸಲಾದ 19362 ಕೂಪನ್‌ಗಳ ಪಡಿತರವನ್ನು ಹೊರತು ಪಡಿಸಿ ಬೇಡಿಕೆ ಸಲ್ಲಿಸುವುದು. ಹಾಗೂ ಈ ಎಲ್ಲಾ 19362 ತಾತ್ಕಾಲಿಕ ಪಡಿತರ ಕೂಪನ್‌ಗಳ ಮಾಹಿತಿಯನ್ನು ನೆಮ್ಮದಿ ಕೇಂದ್ರಗಳ ಡಾಟಾಬೇಸ್‌ನಿಂದ ದಿತೆಗೆದು ಹಾಕಲು ಆದೇಶಿಸಿದೆ. ಅಲ್ಲದೆ, ಈ ಆದೇಶದ ಮೂಲಕ ರದ್ದುಪಡಿಸಲಾದ ತಾತ್ಕಾಲಿಕ ಕೂಪನ್‌ಗಳ ಬಗ್ಗೆ ಆಯಾಯ ನ್ಯಾಯಬೆಲೆ ಅಂಗಡಿಗಳಲ್ಲಿ ತಕ್ಷಣ ಪ್ರಕಟಿಸಲು ಆದೇಶಿಸಿದೆ. ಈ ಬಗ್ಗೆ ತಹಶೀಲ್ದಾರರು ಕ್ರಮವಹಿಸಿ ಪಾಲನಾವರದಿಯನ್ನು ಈ ಕಛೇರಿಗೆ ಸಲ್ಲಿಸಲು ಆದೇಶಿಸಿದೆ.

ಸಹಿ/–
ಜಿಲ್ಲಾಧಿಕಾರಿ.
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ತಹಶೀಲ್ದಾರ್‌ರು, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳು.

4) ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯ್ತಿ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲ.

5) ಮುಖ್ಯ ಕಾರ್ಯನಿರ್ವಹಣಾಧಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

6) ಜಿಲ್ಲಾಧಿಕಾರಿಯವರ ಕಛೇರಿ ಪ್ರಕಟಣ ಫಲಕಕ್ಕೆ.

7) ಜಿಲ್ಲಾ ಮಾಹಿತಿ ಅಧಿಕಾರಿ, ಎನ್.ಐ.ಸಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೆಬ್‌ಸೈಟ್‌ನಲ್ಲಿ ಇದನ್ನು ಅಪ್‌ಲೋಡ್ ಮಾಡಲು ಕೋರಿದೆ.

8) ಮುಖ್ಯ ಕಾರ್ಮಿಕ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.

9) ಕಛೇರಿ ಪ್ರತಿಗಳು.

***(ಕರಡು ಜಿಲ್ಲಾಧಿಕಾರಿಯವರಿಂದ ಅನುಮೋದಿಸಲ್ಪಟ್ಟಿದೆ)***

ಜಿಲ್ಲಾಧಿಕಾರಿಯವರ ಪರವಾಗಿ, 26/9/09
ಬೆಂಗಳೂರು ಗ್ರಾಮಾಂತರ ಜಿಲ್ಲೆ.